ಅಧ್ಯಕ್ಷರು : ಈಗ ತಮ್ಮ ಹತ್ತಿರ ಉತ್ತರ ಇದೆಯಾ?

ಶ್ರೀ ಜಗದೀಶ್ ಶೆಟ್ಟರ್ : ಇದೆ.

ಅಧ್ಯಕ್ಷರು : ಉತ್ತರ ಇದ್ದರೆ ಹೇಳಿ.

ಹನಿ ನೀರಾವರಿಗೆ ಸಹಾಯಧನ ಬಿಡುಗಡೆ

106 (518) ಶ್ರೀ ಶಿವಾನಂದ ಎಸ್. ಪಾಟೀಲ್ (ಬಸವನ ಬಾಗೇವಾಡಿ) : ಮಾನ್ಯ ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2004–05ನೇ ಸಾಲಿಗಾಗಿ ಬಿಜಾಪುರ ಜಿಲ್ಲೆಯ ಹನಿ ನೀರಾವರಿ ಉದ್ದೇಶಕ್ಕಾಗಿ ತೋಟಗಾರಿಕೆ ಇಲಾಖೆಗೆ ಸರ್ಕಾರ ಮಂಜೂರು ಮಾಡಿರುವ ಸಹಾಯಧನವೆಷ್ಟು;

ಆ) ಬಿಡುಗಡೆ ಮಾಡಿರುವ ಸಹಾಯಧನದ ಮೊತ್ತ ಎಷ್ಟು ಹಾಗೂ ಬಾಕಿ ಇರಿಸಿಕೊಂಡಿರುವ ಸಹಾಯಧನದ ಮೊತ್ತ ಎಷ್ಟು;

ಇ) ಬಿಡುಗಡೆಗೊಳಿಸದೇ ಇರಲು ಕಾರಣಗಳೇನು; ಬಾಕಿ ಇರುವ ಸಹಾಯಧನದ ಹಣವನ್ನು ಯಾವಾಗ ಬಿಡುಗಡೆಗೊಳಿಸಲಾಗುವುದು?

ಶ್ರೀ ಬಿ. ನಾಗರಾಜ ಶೆಟ್ಟಿ (ಮೀನುಗಾರಿಕೆ, ಮುಜರಾಯಿ ಮತ್ತು ತೋಟಗಾರಿಕೆ ಸಚಿವರು)

ಅ) ರೂ. 70 ಲಕ್ಷಗಳು.

ಆ) 2004–05ನೇ ಸಾಲಿನಲ್ಲಿ ಬಿಡುಗಡೆ ಮಾಡಿರುವ ಸಹಾಯಧನ ಮೊತ್ತ ರೂ. 70 ಲಕ್ಷಗಳು.

31–3–2005ರ ಅಂತ್ಯಕ್ಕೆ ನೀಡಬೇಕಾದ ಸಹಾಯಧನ ಬಾಕಿ ರೂ. 576 ಲಕ್ಷಗಳು.

ಇ) ಅನುದಾನದ ಕೊರತೆ. 2005–06ನೇ ಸಾಲಿನಲ್ಲಿ ರೂ. 358 ಲಕ್ಷ ಬಿಡುಗಡೆ ಮಾಡಲಾಗಿರುತ್ತದೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ನನ್ನ ಪ್ರಶ್ನೆ ಸ್ಪಷ್ಟವಾಗಿ ಇದೆ. ಅದನ್ನು ತಾವು ನೋಡಬಹುದು. ನಾನು ಈ ಪ್ರಶ್ನೆಯನ್ನು ವಿಶೇಷವಾಗಿ ಬಿಜಾಪುರ ಜಿಲ್ಲೆಗೆ ಸಂಬಂಧಪಟ್ಟ ಹನಿ ನೀರಾವರಿ ಯೋಜನೆಯಲ್ಲಿ ಆಗಿರುವಂತಹ ವಿಳಂಬದ ಬಗ್ಗೆ ಕೇಳಲಿಚ್ಚಿಸಿದ್ದೆ. Unfortunately, 2005ರಲ್ಲಿ ಒಂದು ಪ್ರಶ್ನೆಯನ್ನು ಕೇಳಲಾಗಿದೆ. ಇದೇ ಹನಿ ನೀರಾವರಿಯ ಬಗ್ಗೆ unstarred question ಇದೆ. ನಾನು ಕೇಳಿರುವಂಥಾದ್ದು ರಾಜ್ಯದಲ್ಲಿ ಹನಿ ನೀರಾವರಿಯಲ್ಲಿ ಆಗಿರುವಂತಹ ವ್ಯತ್ಯಾಸ ಏನು? ಎನ್ನುವಂಥಾದ್ದರ ಬಗ್ಗೆ ಪ್ರಶ್ನೆ ಇದೆ. ನಮ್ಮ ಜಿಲ್ಲೆಯಲ್ಲಿ 2004–05ರಲ್ಲಿ ಐದು ಕೋಟಿ ಎಪ್ಪತ್ತಾರು ಲಕ್ಷ ರೂಪಾಯಿಗಳು drispsubsidy ಬರಬೇಕಾಗಿತ್ತು. Unfortunately ಬರೀ 76 ಲಕ್ಷ ರೂಪಾಯಿಗಳು ಮಾತ್ರ ಬಂದಿದೆ. ಎರಡನೆಯದಾಗಿ ತಾವು ಏನು ಹೇಳಿದ್ದೀರಿ. ಹಿಂದಿನ ಸರ್ಕಾರ ಕೋಲಾರ; ಬಿಜಾಪುರಕ್ಕೆ

ಶೇಕಡ ನೂರಕ್ಕೆ ನೂರರಷ್ಟು drip subsidy ಯನ್ನು ಇಟ್ಟಿದ್ದರು. ಆದರೆ ಈಗ ಇದನ್ನು ನೀವು ರಾಜ್ಯವ್ಯಾಪ್ತಿ ವಿಸ್ತರಿಸಿದ್ದೀರಿ. ಇಡೀ ರಾಜ್ಯಕ್ಕೆ ಈ ವರ್ಷ ಶೇಕಡ 75ರಷ್ಟು ಡ್ರಿಪ್ ಸಬ್ಸಿಡಿಯನ್ನು ಕೊಡುತ್ತೇವೆ. ಬಿಜಾಪುರಕ್ಕೆ ಶೇಕಡ 100ರಷ್ಟು ಸಬ್ಸಿಡಿಯನ್ನು ಕೊಡುತ್ತೇವೆಂಬ ಮಾತನ್ನು ಆಡಿದ್ದೀರಿ. ನೀವು ಹೋದ ವರ್ಷದ್ದು ಇದುವರೆಗೂ ಕೊಟ್ಟಿಲ್ಲ. ನೀವೇ ನಿಮ್ಮ ಉತ್ತರದಲ್ಲಿ ಹೇಳಿದ್ದೀರಿ. At the end of 31.3.2005 the balance of subsidy amount to be released is around Rs. 576 lakhs. ಇದನ್ನು ಕೊಡದೇ ಮುಂದಿನ ಸಬ್ಸಿಡಿ ಹೇಗೆ ಕೊಡುತ್ತೀರಿ? ಇದನ್ನು ನೀವೊಬ್ಬರೇ ಕೊಡುವುದಿಲ್ಲ. ಕೇಂದ್ರ ಸರ್ಕಾರ ಕೂಡ ಇದಕ್ಕೆ ಇಪ್ಪತ್ತೈದು ಪರ್ಸೆಂಟ್ ಸಬ್ಸಿಡಿಯನ್ನು ಕಾಂಟ್ರಿಬ್ಯೂಟ್ ಮಾಡುತ್ತದೆ. ಅದಕ್ಕೆ ನೀವು ಮ್ಯಾಚಿಂಗ್ ಗ್ರಾಂಟ್ ಹಾಕಿ ಕೊಟ್ಟರೆ ಸಾಕಾಗಿತ್ತು. ಕೇಂದ್ರ ಸರ್ಕಾರದ ಹಣ ಯುಟಿಲೈಸೇಷನ್ ಆಗದೇ ಎಷ್ಟೋ ಸಲ ವಾಪಸ್ಸು ಹೋಗಿರುವಂಥ ನಿರ್ದೇಶನಗಳಿವೆ. ಈ ಬಗ್ಗೆ ನಿಮ್ಮ ಇಲಾಖಾಧಿಕಾರಿಗಳು ಹೇಳಿರುವರೇ ಇದು ಒಂದು. ಎರಡನೆಯದಾಗಿ, ಬಿಜಾಪುರ ಜಿಲ್ಲೆಯಲ್ಲಿ ಡ್ರಿಪ್ ಇರಿಗೇಷನ್ ಸಬ್ಸಿಡಿಯಲ್ಲಿ ಮಿಸ್‌ಯುಟಿಲೈಸೇಷನ್ ಆಗಿದೆ ಎನ್ನತಕ್ಕಂಥ ಬಹಳಷ್ಟು ಆಪಾದನೆ ಕೂಡ ಇದೆ. ಇದು ಬಿಜಾಪುರ ಜಿಲ್ಲೆಯಲ್ಲಿ ಮಾತ್ರವಲ್ಲ ಕೋಲಾರದಲ್ಲೂ ಆಗಿರಬಹುದು. ಎಂಟೈರ್ ಸ್ಟೇಟ್‌ನಲ್ಲೂ ಆಗಿರಬಹುದು. ಅದರ ಬಗ್ಗೆ ನೀವು ಮಾಹಿತಿ ತರಿಸಿಕೊಂಡು ವಿಚಾರ ಮಾಡಬಹುದು. ಈ ಬಗ್ಗೆ ಹಿಂದೆ ಒಂದು ಸ್ಟಾರ್ಡ್ ಕ್ವಶ್ಚನ್ ನಿಮ್ಮ ಹೆಸರಿನಲ್ಲೇ ಇದೆ. ಅದರ ಬಗ್ಗೆ ತಮ್ಮ ಅಭಿಪ್ರಾಯ ಏನು ಎನ್ನತಕ್ಕಂಥಾದ್ದನ್ನು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಸನ್ಮಾನ್ಯ ಅಧ್ಯಕ್ಷರೆ, ಹನಿ ನೀರಾವರಿ ಉದ್ದೇಶಕ್ಕಾಗಿ ತೋಟಗಾರಿಕೆ ಇಲಾಖೆಗೆ ಸರ್ಕಾರ ಮಂಜೂರು ಮಾಡಿದಂಥ ಸಹಾಯಧನದ ಬಗ್ಗೆ ಮಾನ್ಯ ಶಿವಾನಂದ ಪಾಟೀಲರು ಪ್ರಶ್ನೆಯನ್ನು ಕೇಳಿದ್ದಾರೆ. ಪರ್ಟಿಕ್ಯುಲರ್‌ಲಿ ಬಿಜಾಪುರ ಜಿಲ್ಲೆಯ ಬಗ್ಗೆ ಕೇಳಿದ್ದಾರೆ. ಅದರ ಬಗ್ಗೆ ಸ್ಪಷ್ಟವಾದಂಥ ಉತ್ತರವನ್ನು ನಾವು ಒದಗಿಸಿದ್ದೇವೆ. ಇನ್ನೊಂದು ಮಾಹಿತಿಯನ್ನು ನಾವು ಇಲ್ಲಿ ಕೊಡಬಯಸುವುದು ಏನೆಂದರೆ, 2003–04ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯಲ್ಲಿ ಒಟ್ಟು 2,678 ಅರ್ಜಿಗಳನ್ನು ಸ್ವೀಕಾರ ಮಾಡಿದ್ದೆವು ಮತ್ತು ಆ ಸಂದರ್ಭದಲ್ಲಿ ಬಿಡುಗಡೆಯಾದಂಥ ಹಣ 280 ಲಕ್ಷ ರೂಪಾಯಿಗಳು. ಆಗ ನಾವು 994 ಅರ್ಜಿಗಳನ್ನು ಡಿಸ್ಪೋಸಲ್ ಮಾಡಿದ್ದೇವೆ. 2004–05ನೇ ಸಾಲಿನಲ್ಲಿ 70 ಲಕ್ಷ ರೂಪಾಯಿಗಳ ಅನುದಾನದಲ್ಲಿ 267 ಅರ್ಜಿಗಳನ್ನು ನಾವು ಡಿಸ್ಪೋಸಸ್ ಮಾಡಿದ್ದೇವೆ. ಆ ಸಾಲಿನಲ್ಲಿ 1,417 ಅರ್ಜಿಗಳು ಬಾಕಿ ಉಳಿದಿದ್ದು, ಅವುಗಳನ್ನು ಇತ್ಯರ್ಥಗೊಳಿಸಲು 567 ಲಕ್ಷ ರೂಪಾಯಿಗಳ ಅವಶ್ಯಕತೆ ಇದೆ. 2005–06ನೇ ಸಾಲಿನಲ್ಲಿ ರಾಜ್ಯ ಸರ್ಕಾರದಿಂದ 70 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆಯಾಗಿದೆ ಮತ್ತು ನಬಾರ್ಡ್‌ನ ಆರ್.ಐ.ಪಿ.ಎಸ್. ಯೋಜನೆಯಿಂದ 280 ಲಕ್ಷ ರೂಪಾಯಿಗಳು ಬಿಡುಗಡೆಯಾಗಿರುತ್ತದೆ. ಒಟ್ಟು 358 ಲಕ್ಷ ರೂಪಾಯಿಗಳ ಅನುದಾನದಲ್ಲಿ

1,257 ಅರ್ಜಿಗಳನ್ನು ನಾವು ಈಗಾಗಲೇ ಇತ್ಯರ್ಥ ಮಾಡಿದ್ದೇವೆ. 2005–06ರ ಅಂತ್ಯಕ್ಕೆ 160 ಅರ್ಜಿಗಳು ಬಾಕಿ ಉಳಿದಿದ್ದು, ಅವುಗಳನ್ನು ಇತ್ಯರ್ಥಪಡಿಸಲು ಸುಮಾರು 50 ಲಕ್ಷ ರೂಪಾಯಿಗಳು ಬೇಕಾಗಿರುತ್ತದೆ. ಈ ಸಾಲಿನಲ್ಲಿ ಇದಕ್ಕಾಗಿ 44 ಕೋಟಿ ರೂಪಾಯಿಗಳನ್ನು ಒದಗಿಸಿದ್ದೇವೆ. ಹೀಗಾಗಿ, ಈ ವರ್ಷದ ಅವಧಿಯಲ್ಲಿ ಹೆಚ್ಚು ಕಡಿಮೆ, ಬಾಕಿ ಉಳಿದಿರುವ ಅರ್ಜಿಗಳಿಗೆ ಸಹಾಯಧನ ಕೊಡುವಂಥಾದ್ದು ಆಗುತ್ತದೆ ಎಂದು ನಾನು ಭರವಸೆಯನ್ನು ಕೊಡುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಈ ವರ್ಷ ನೀವು ಬಜೆಟ್‌ನಲ್ಲಿ ಇಟ್ಟಿರುವುದೇ 44 ಕೋಟಿ ರೂಪಾಯಿಗಳು. ಹೋದವರ್ಷ ಈ ಉದ್ದೇಶಕ್ಕಾಗಿ 30 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಆಗ ಎರಡು ಜಿಲ್ಲೆಗಳಿಗೆ ಕೊಡಬೇಕಾಗಿರತಕ್ಕಂಥ ಹಣವನ್ನು ಒದಗಿಸತಕ್ಕಂಥಾದ್ದಕ್ಕೆ ಈ ಸರ್ಕಾರಕ್ಕೆ ಸಾಧ್ಯವಾಗಲಿಲ್ಲ. ಈಗ ನೀವು ಇಡೀ ರಾಜ್ಯವ್ಯಾಪಿಯಾಗಿ ಎಪ್ಪತ್ತೈದು ಪರ್ಸೆಂಟ್ ಸಬ್ಸಿಡಿ ಕೊಡತಕ್ಕಂಥ ಮಾತನ್ನು ಆಡಿದ್ದೀರಿ. ಹಿಂದಿನ ಬಾಕಿಯನ್ನು ಚುಕ್ತಾ ಮಾಡದೇ ಹೊಸ ಯೋಜನೆಯನ್ನು ಬಜೆಟ್‌ನಲ್ಲಿ ಘೋಷಣೆ ಮಾಡತಕ್ಕಂಥಾದ್ದು ಸೂಕ್ತವಲ್ಲ ಎಂದು ನನಗನ್ನಿಸುತ್ತದೆ. ಆದರೆ ನೀವು ನಿಮ್ಮ ಮಾನಿಫೆಸ್ಟೋದಲ್ಲಿ ಘೋಷಣೆ ಮಾಡಿದ್ದೀರಿ, ಮಾಡಿಕೊಳ್ಳಿ. ಆದರೆ ಅದನ್ನು ನಿರ್ವಹಿಸತಕ್ಕಂಥ ಶಕ್ತಿ ಈ ವರ್ಷವಾದರೂ ಖಂಡಿತಾ ಬರುತ್ತದೆಯೇ ಎಂದು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್ : 160 ಅರ್ಜಿಗಳು ಬಾಕಿ ಉಳಿದಿವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಹಿಂದಿನ ವರ್ಷದಲ್ಲಿ ಮೂರು ಕೋಟಿ ರೂಪಾಯಿಗಳ ಬಾಕಿ ನಮ್ಮ ಜಿಲ್ಲೆಯಲ್ಲೇ ಉಳಿದಿದೆ.

ಶ್ರೀ ಜಗದೀಶ್ ಶೆಟ್ಟರ್ : ಅದನ್ನು ನಾನು ಹೇಳುತ್ತೇನೆ. ಈ ವರ್ಷದ ಬಜೆಟ್‌ನಲ್ಲಿ ಒಟ್ಟು 44 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಬಿಜಾಪುರ ಜಿಲ್ಲೆಗೆ ಏನೇನು ಬಾಕಿ ಉಳಿದಿದೆ ಅದೆಲ್ಲವನ್ನೂ ಸಂಪೂರ್ಣವಾಗಿ ಇತ್ಯರ್ಥಪಡಿಸುವಂಥಾದ್ದನ್ನು ಈ ವರ್ಷ ಮಾಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್ : ಮುಂದಿನ ವರ್ಷಕ್ಕಾಗಿ ಇಟ್ಟಿರುವ 44 ಕೋಟಿ ರೂಪಾಯಿಗಳಲ್ಲಿ ನೀವು ಇಡೀ ರಾಜ್ಯಕ್ಕೆ ಮಾಡುವುದಕ್ಕಾಗುತ್ತದೆಯೇ?

ಶ್ರೀ ಜಗದೀಶ್ ಶೆಟ್ಟರ್ : ಪ್ರತಿವರ್ಷ ಮಾಡಿಕೊಂಡು ಬಂದಿದ್ದೇವೆ. ಪ್ರಿಯಾರಿಟಿ ಮೇಲೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

ಅಧ್ಯಕ್ಷರು :– ಆಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

5. ಚುಕ್ಕೆ ಗುರ್ತಿನ ಹಾಗೂ ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಗುರುವಾರ, ದಿನಾಂಕ 06ನೇ ಏಪ್ರಿಲ್ 2006ರ (ಶುಕ್ರವಾರ, ದಿನಾಂಕ 31ನೇ ಮಾರ್ಚ್ 2006ರಂದು